ಎಂ.ವಿ.ಸಿಃ 200/2025
ಪಿ.ಡಬ್ಲ್ಯೂ : 02

ದಿನಾಂಕ 10-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರವರಿಂದಃ

ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಇವು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದೆ. ನಾನು ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿಪಿ-20 | ಕೇಸ್ ಶೀಟ್ |

**ನಿಪಿ.15 ಮತ್ತು 16 ರ ಸಹಿಗಳನ್ನು ಸಾಕ್ಷಿ ಗುರುತಿಸಿದ್ದು, ನಿಪಿ.15(ಎ) ಮತ್ತು 16(ಎ) ಎಂದು ಗುರುತಿಸಲಾಯಿತು.**

ಪಾಟೀ ಸವಾಲುಃ **2** ನೇ ಎದುರುದಾರ ಪರ ವಕೀಲರಿಂದಃ

ಅರ್ಜಿದಾರರಿಗೆ ಪ್ರಾಥಮಿಕ ಚಿಕಿತ್ಸೆಯನ್ನು ನಾನೇ ನೀಡಿರುತ್ತೇನೆ. ಅರ್ಜಿದಾರರಿಗೆ ಆದ ಮೂಳೆ ಮುರಿತ ಸರಿಯಾಗಿ ಜೋಡಣೆ ಆಗಿದೆ. ಅರ್ಜಿದಾರರಿಗೆ ಸಂಪೂರ್ಣ ಗುಣಮುಖವಾದ ನಂತರ ಆಸ್ಪತ್ರೆ ಯಿಂದ ಬಿಡುಗಡೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಅರ್ಜಿದಾರರು ಒಂದು ದಿನ ಮಾತ್ರ ಒಳರೋಗಿಯಾಗಿದ್ದರು . ಅರ್ಜಿದಾರರಿಗೆ ಈಗ ಯಾವುದೇ ಚಿಕಿತ್ಸೆ ಬಾಕಿ ಇಲ್ಲ ಎಂದರೆ ಸರಿ . ಅರ್ಜಿದಾರರು ಅಪಘಾತದ ಸಮಯದಲ್ಲಿ ಏನು ಕೆಲಸ ಮಾಡುತಿದ್ದರು ಎಂದು ನಾನು ಕೇಸ್ ಶೀಟ್ ನಲ್ಲಿ ನಮೂದು ಮಾಡಿರುತ್ತೇನೆ. ಅರ್ಜಿದಾರರ ಉದ್ಯೋಗವನ್ನು ನೋಡಿ ಅಂಗನ್ಯೂನತೆಯನ್ನು ನಿಗದಿಪಡಿಸಿಲ್ಲ. ಕೇಂದ್ರ ಸರ್ಕಾರದ ಗೈಡ್‌ಲೈನ್ಸ್ ನ ಅಡಿಯಲ್ಲಿ ನಾವು ಅಂಗನ್ಯೂನತೆಯನ್ನು ನಿಗದಿಪಡಿಸಿರುತ್ತೇವೆ. ಅರ್ಜಿದಾರರು ಕೆಲಸ ಮಾಡಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಆದ ಎಡಕೈನ ಅಪ್ಪರ್ ಲಿಂಬ್ ಗೆ ಸಂಬಂದಪಟ್ಟಂತೆ ನಾನು ಅಂಗನ್ಯೂನತೆಯನ್ನು ನಿಗದಿಪಡಿಸಿರುತ್ತೇನೆ . ಅಂಗನ್ಯೂನತೆ ನಿಗದಿಪಡಿಸಿದ ಬಗ್ಗೆ ನಾನು ಕೇಸ್ ಶೀಟ್ ನಲಿ ನಮೂದು ಮಾಡಿರುತ್ತೇನೆ . ಅರ್ಜಿದಾರರು ದಿನನಿತ್ಯದ ಕೆಲಸ ಮಾಡಲು ತೊಂದರೆ ಇಲ್ಲ.

ಅರ್ಜಿದಾರರು ಕೊನೆಯ ಬಾರಿಗೆ ನಮ್ಮ ಆಸ್ಪತ್ರೆಗೆ ಅಂಗನ್ಯೂನ್ಯತೆ ಪರೀಕ್ಷೆಗಾಗಿ 09-09-2025 ರಂದು ಬಂದಿದ್ದರು . ಅರ್ಜಿದಾರರು ಹೊರರೋಗಿಯಾಗಿ 8 ಬಾರಿ ಬಂದಿದ್ದರು . ಅರ್ಜಿದಾರರು ಆರೋಗ್ಯ ಕಾರ್ಡ್ ನ ಅಡಿಯಲ್ಲಿ ವಿಮಾ ಸೌಲಭ್ಯ ಪಡೆದಿದಾರೋ ಇಲ್ಲವೋ ಎಂದು ಆಸ್ಪತ್ರೆಯ Account branch ನವರನ್ನು ಕೇಳಬೇಕು . ಅರ್ಜಿದಾರರಿಗೆ ಹೆಚ್ಚಿನ ಪರಿಹಾರ ಸಿಗಲಿ ಎಂದು ಸುಳ್ಳು ಅಂಗನ್ಯೂನ್ಯತೆ ಪ್ರಮಾಣ ಪತ್ರ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ**.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ. ಉಡುಪಿ.